ಬಿಟ್ಟು ಒಳಗೆ ನಡೆದಳು. ಕ್ಷಣದಲ್ಲಿಯೇ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯೊಂದಿಗೆ ಹಾಜರಾದಳು. ಫಾರ್ಮ್ ಹೌಸ್‌ನ ಬಳಿ ಕಟಾವಿನ ಕೆಲಸ ಆರಂಭವಾಗುವ ಸಮಯದಲ್ಲಿ ಕೆಲಸದಾಳುಗಳು ಸುಳ್ಳು ಸಬೂಬು ನೀಡಿ ಕೆಲಸಕ್ಕೆ ತಪ್ಪಿಸುವುದು ಮಾಮೂಲು. ಅದಕ್ಕಾಗಿ ಭುಜಂಗೇಶರಾಯರು ಅವರಿಗೆ ಬೇಕಾದ ಪ್ರಥಮ ಚಿಕಿತ್ಸೆಯ ಔಷಧಿಗಳನ್ನು ತಂದಿರಿಸುವುದು. ಅದು ಮೇನಕಾಳಿಗೂ ತಿಳಿದ ವಿಷಯ. ಆ ಪೆಟ್ಟಿಗೆ ಈಗ ರಾಮಸ್ವಾಮಿಯ ಗಾಯಕ್ಕೆ ಉಪಯೋಗಕ್ಕೆ ಬಂತು.

ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯನ್ನು ಕಿರಣನತ್ತ ನೀಡಿದಳು. ಕಿರಣ ಪರಿಣಿತ ವೈದ್ಯನಂತೆ ಅದನ್ನು ತೆರೆದು ಡೆಟಾಲ್‌ನಿಂದ ಹಣೆಯ ಗಾಯವನ್ನು ತೊಳೆದು ಹಳದಿ ಮುಲಾಮು ಸವರಿದ.

ರಾಮಸ್ವಾಮಿ ಏನೂ ಆಗಿಲ್ಲವೆನ್ನುವಂತೆ ಎದ್ದು ಓಡಾಡ ತೊಡಗಿದ. ಮೇನಕಾ ನೆಮ್ಮದಿಯ ನಿಟ್ಟುಸಿರಿಟ್ಟಳು. ಕಿರಣ ಒಳಗೆಲ್ಲಾ ಕಣ್ಣಾಡಿಸಿದ. ರಹಸ್ಯ ಪಾರ್ಟಿಗೆ ಸಜ್ಜಾಗಿದ್ದ ಫಾರ್ಮ್ ಹೌಸ್ ಕಳೆಯಿಲ್ಲದೆ ಗೋದಾಮಿನಂತೆ ಕಂಡಿತು. ಇಬ್ಬರಲ್ಲೂ ಪಾರ್ಟಿಯ ಕಾವು ಇಳಿದಿತ್ತು.

ಕಿರಣನ ಮನದಲ್ಲಿ ಬೇಸರದ ಛಾಪು ಮೂಡಿತು. ತನ್ನಿಂದಾಗಿಯೇ ಇಷ್ಟೆಲ್ಲಾ ಸಂಭವಿಸಿದೆ. ಇದರಿಂದ ತಾನು ಮೇನಕಾಳನ್ನು ಸಾಂತ್ವನಿಸುವುದು ಹೇಗೆ? ಆಲೋಚನೆಯ ದಾರಿ ಹಿಡಿದಾಗ ಮೇನಕಾ ಅವನ ಪಕ್ಕಕ್ಕೆ ಸರಿದು ಅವನ ಕೈಯಲ್ಲಿದ್ದ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯನ್ನು ತೆಗೆದುಕೊಂಡು ಒಳಗಿನ ಕೋಣೆಯ ಮರದ ಕಪಾಟಿಗೆ ಸೇರಿಸಿದಳು.

ರಾಮಸ್ವಾಮಿ ತಂಗಾಳಿ ಸೇವಿಸಲು ಹೊರಗೆ ಬಂದ. ಪಾರ್ಟಿ ನಡೆಯುವ ವಿಷಯ ತಿಳಿದದ್ದು ಅವನಿಗೆ ಮಾತ್ರ. ಆದರೆ ಸಣ್ಣಮ್ಮೋರ ವೈಯಕ್ತಿಕ ವಿಷಯಕ್ಕೆ ತಲೆ ಹಾಕದ ನಿಯತ್ತಿನ ಮನುಷ್ಯ ರಾಮಸ್ವಾಮಿ. ಶಿವ ಪೂಜೆಯಲ್ಲಿ ಕರಡಿಯ ಹಾಗೆ ತಾನಲ್ಲಿದ್ದರೆ ಅನ್ನುವ ಕಾರಣಕ್ಕೆ ಜಾಣ ಕುರುಡನಂತೆ ಹೊರಗೆ ಬಂದ.

ಮೇನಕಾಳಿಗೆ ಕಿರಣನ ಬಳಿ ವೈಯಕ್ತಿಕ ವಿಷಯಗಳನ್ನು ಮಾತನಾಡುವ ಇಚ್ಛೆ! ಕಿರಣ ಅದರಿಂದ ದೂರವಾದ. ತಾನು ಬರುವಾಗ ಹೊತ್ತು ಮೀರಿದ್ದಕ್ಕೆ ಈ ರೀತಿಯ ಅನಾಹುತಗಳಾಗಿವೆ.ಎಲ್ಲಕ್ಕಿಂತಲೂ ಮಿಗಿಲಾಗಿ ತನ್ನಂತೆಯೇ ಇರುವ ಇನ್ನೊಬ್ಬ ವ್ಯಕ್ತಿ ಈ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡು ಅನಗತ್ಯ ತೊಂದರೆಗೊಳಗಾಗಿದ್ದಾನೆ! ಯಾರಾತ? ಅವನನ್ನು ಗುರುತು ಹಿಡಿಯುವುದು ಹೇಗೆ? ಆತನಿಗೆ ಈ ಫಾರ್ಮ್ ಹೌಸ್‌ನಲ್ಲಿ ಏನು ಕೆಲಸ? ಮೆದುಳು ಕೆಲಸ ಆರಂಭಿಸಿತು. ಎದುರಿಗೆ ನಿಂತವಳನ್ನು ಮರೆತಂತೆ ಯೋಚನೆಗೊಳಗಾದ.

'ಕಿರಣ, ನಡೆದುದೆಲ್ಲವೂ ಕೆಟ್ಟ ಕನಸು ಅಂದ್ಕೋ' ಮೇನಕಾಳತ್ತ ನೋಡಿದ. ಕೆಟ್ಟ ಕನಸುಗಳಾಗಿದ್ದರೆ ಮರೆತು ಬಿಡಬಹುದು. ಇದು ನಡೆದಿರುವುದು ವಾಸ್ತವದಲ್ಲಿ. ಅದನ್ನು ತಿಳಿದುಕೊಳ್ಳದಿದ್ದರೆ ನಾಳೆ ತನಗೆ ಹಾಗೂ ಮೇನಕಾಳಿಗೆ ಅಪಾಯ ತಪ್ಪಿದ್ದಲ್ಲ.

'ಮೇನಕಾ, ನಾವಿಬ್ಬರೂ ಎಂತಹ ಬಲೆಯೊಳಗೆ ಸಿಕ್ಕಿ ಹಾಕಿಕೊಂಡಿದ್ದೇವೆ ಅನ್ನೋದು ನಿನಗೆ ಗೊತ್ತಾ? ನಮ್ಮಿಂದಾಗಿ ರಾಮಸ್ವಾಮಿನೂ ನೋವು ಅನುಭವಿಸ್ಬೇಕಾಯಿತು' ಅನುಕಂಪ ತೋರಿಸಿದ ಕಿರಣ ಸೋಫಾದಲ್ಲಿ ಕುಳಿತುಕೊಳ್ಳುತ್ತಾ.

'ನೀನು ಹೇಳೋದು ಸರಿ ಕಿರಣ. ಆದ್ರೆ ಅದನ್ನು ಮೆಲುಕು ಹಾಕುವುದರಿಂದ ಏನು ಪ್ರಯೋಜನ ಹೇಳು. ಅದನ್ನ ಮರ್ತು ಬಿಡೋದು ಒಳ್ಳೆಯದು. ನಮಗೆ ಹುಟ್ಟಿಕೊಂಡಿರೋ ಶತ್ರುವಿನಿಂದ ನಿಂಗೂ ಏನೂ ಆಗ್ಲಿಲ್ಲ, ನಂಗೂ ಏನೂ ಆಗಿಲ್ಲ. ಅದೇ ನಮ್ಗೆ ಸಮಾಧಾನ' ನಿಟ್ಟುಸಿರಿಟ್ಟ ಮೇನಕಾಳ ಕಣ್ಣುಗಳನ್ನು ದೃಷ್ಟಿಸಿದ ಕಿರಣ. ಅವಳ ಕಣ್ಣುಗಳಲ್ಲಿ ಮೃತ್ಯುವನ್ನು ಗೆದ್ದು ಬಂದ ಸಂತಸವಿತ್ತು.

**ತೊಟ್ಟಿಲು**

ಅನೈತಿಕತೆಯ ಅಳು
ತೊಟ್ಟಿಯಲ್ಲಿ
ನೈತಿಕತೆಯ ಅಳು
ತೊಟ್ಟಿಲಲ್ಲಿ!

★ದೇವಕಿಸುತ



ಈಶ್ವರ

'ಆದ್ರೆ ನಾವು ಇದನ್ನು ಇಲ್ಲಿಗೆ ಬಿಟ್ಟು ಬಿಟ್ರೆ ಮುಂದೆ ಹೆಚ್ಚು ಅಪಾಯ. ನಮ್ಮ ಎದುರಿಗೆ ಎರಡು ಸಾಧ್ಯತೆಗಳು ಇವೆ. ಅವನ್ನ ನಾವು ಕಂಡು ಹಿಡಿಯ ಬೇಕಿದೆ'

'ಏನದು, ಎರಡು ಸಮಸ್ಯೆಗಳು?'

'ಸಮಸ್ಯೆಗಳು ಅಂದಿಲ್ಲ ನಾನು. ಎರಡು ಸಾಧ್ಯತೆಗಳು. ಒಂದು ನನ್ನ ಹಾಗೆ ಇರೋ ತದ್ರೂಪಿನ ಕಂಡು ಹಿಡಿಯೋದು. ಇನ್ನೊಂದು `ಬಂಡೆ'ಯತ್ತ ಹೋಗಿ ಕಾಶಮ್ಮನ ದೂರದ ಸಂಬಂಧಿಯನ್ನು ನೇರವಾಗಿ ಎದುರಿಸೋದು'

'ಇದು ಸಾಧ್ಯತೆಗಳಲ್ಲ ಕಿರಣ. ಇದರಿಂದ ಇನ್ನಷ್ಟು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ'

'ಸಮಸ್ಯೆಗಳು ಹುಟ್ಟಿಕೊಳ್ಳೋದೆ? ಅದು ಹೇಗೆ ಸಾಧ್ಯ?'

'ನೀನು ಕಾಕುಟ್ಟ ಅಂದ್ರೆ, ನನ್ನ ಚಿಕ್ಕಮ್ಮನ ದೂರದ ಸಂಬಂಧಿಯನ್ನು ಭೇಟಿಯಾಗ್ತೀಂತ ಇಟ್ಟುಕೋ. ಆಗ ದ್ವೇಷಕ್ಕೆ ದ್ವೇಷ ಬೆಳೆಯುತ್ತೆ. ಅವನು ನೇರವಾಗಿ ನಿನ್ನನ್ನು ಹೊಡೆದು ಹಾಕಿದ್ರೆ, ಏನ್ಮಾಡ್ತೀಯಾ? ನಿನ್ನತ್ರ ಅವನನ್ನು ಎದುರಿಸೋ ಮಾನಸಿಕ ಅಥವಾ ದೈಹಿಕ ಬಲ ಇದೆಯಾ?'

ಮೇನಕಾಳ ಮಾತಿಗೆ ಕಿರಣ ಆಶ್ಚರ್ಯದಿಂದ ಅವಳನ್ನು ನೋಡಿದ. ತನ್ನ ಮಾನಸಿಕ ಹಾಗು ದೈಹಿಕ ಬಲದ ಬಗ್ಗೆ ಸಂದೇಹ ಪಟ್ಟಿದ್ದಾಳೆ. ಅದೂ ತನ್ನನ್ನು ಪ್ರೀತಿಸುವ ಮತ್ತು ತಾನು ಪ್ರೀತಿಸುತ್ತಿರುವ ಹುಡುಗಿ. ಅದನ್ನು ಸಾಬೀತುಪಡಿಸಬೇಕಾದರೆ ಕಾಕುಟ್ಟನನ್ನು ಎದುರಿಸಲೇಬೇಕು.

ಕಿರಣ ಉದ್ದೇಶಪೂರ್ವಕವಾಗಿ ಅಂಗಿಯ ಕೈಯನ್ನು ಮಡಚಿ ತೋಳನ್ನು ಉಬ್ಬಿಸಿ ತೋರಿಸಿದ.

'ನೋಡು, ಕಾಕುಟ್ಟನಂತಹ ನೂರಾರು ಜನರನ್ನು ಸುಲಭದಲ್ಲಿ ಎದುರಿಸುವ ದೈಹಿಕ ಮತ್ತು ಮಾನಸಿಕ ಸ್ಥೈರ್ಯ ನನ್ನಲಿದೆ. ನೋಡ್ತಾ ಇರು. ಕಾಕುಟ್ಟನ ಬಾಯಿಯಿಂದಲೇ ಎಲ್ಲವನ್ನೂ ತಿಳಿದುಕೊಳ್ಳುತ್ತೇನೆ' ಪ್ರತ್ಯಕ್ಷವಾಗಿ ಮೇನಕಾಳಿಗೆ ಸವಾಲೆಸೆದ.

ಮೇನಕಾಳಿಗೆ ತಪ್ಪಿನ ಅರಿವಾಯಿತು. ಸಮಜಾಯಿಷಿ ನೀಡಲು ಯತ್ನಿಸಿದಳು.

'ಕಿರಣ, ನಾನು ಆ ಅರ್ಥದಿಂದ ಹೇಳಿಲ್ಲ. ನಿನ್ನ ಸಾಮರ್ಥ್ಯದ ಬಗ್ಗೆ ನನಗೆ ತಿಳಿಯದ್ದೆ? ಕಾಕುಟ್ಟನ ಜೊತೆಗೆ ವ್ಯವಹರಿಸುವಾಗ ಬಹಳ ಜಾಗರೂಕತೆ ಯಿಂದಿರುವುದು ಒಳ್ಳೆಯದಲ್ಲವೆ? ಅದಕ್ಕೆ ಎಚ್ಚರಿಸಿದೆ ನಿನ್ನ'

'ಅವನ ಜೊತೆಗೆ ಹೇಗೆ ಇರಬೇಕೆನ್ನುವುದು ನನಗೆ ಗೊತ್ತು. ಮೊದಲು ಅವನ ವ್ಯವಹಾರವೇನೆನ್ನುವುದು ತಿಳಿದುಕೊಳ್ಳಬೇಕು. ಆತ ನನ್ನ ಪ್ರಾಣಕ್ಕೆ ಸವಾಲು ಎಸೆದಿರುವುದರಿಂದ ನಾನು ನಿನ್ನ ಚಿಕ್ಕಮ್ಮ ಕಾಶಮ್ಮನನ್ನು ಮೊದಲು ಭೇಟಿಯಾಗುವುದು ಒಳ್ಳೆಯದು. ನೀನು ಈ ವಿಷಯದಲ್ಲಿ ನನ್ನ ಜೊತೆಗೆ ಸಹಕರಿಸ್ಬೇಕು' ಮೊದಲ ಬಾರಿಗೆ ಮೇನಕಾಳ ಸಹಾಯವನ್ನು ಯಾಚಿಸಿದ್ದ.

'ಖಂಡಿತವಾಗಿಯೂ ನನ್ನ ಸಹಾಯ ನಿನಗೆ ಇದ್ದೇ ಇದೆ. ನಿಂಗೋಸ್ಕರ ನಾನು ಅಷ್ಟನ್ನೂ ಮಾಡಲಾರೆನೆ? ಆದ್ರೆ ನಿನ್ನ ಪ್ರಾಣವನ್ನು ಪಣವಾಗಿಡುವುದಾದರೆ ಅಂತಹ ಧೂರ್ತನಿಂದ ದೂರವಿರುವುದೇ ಲೇಸು' ಎಚ್ಚರಿಕೆಯ ಮಾತುಗಳನ್ನು ಹೇಳಲು ಮರೆಯಲಿಲ್ಲ ಅವನ ಪ್ರೇಮಿಕೆಯಾದವಳು.

ಮೇನಕಾ ತಕ್ಷಣವೇ ಏನೋ ನೆನಪಾಗಿ ಸುತ್ತಲೂ ನೋಡಿದಳು. ಕಿರಣನಿಗೂ ಅವಳ ಹುಡುಕಾಟ ಏನೂ ಅನ್ನುವುದು ತಿಳಿಯಲಿಲ್ಲ.

'ಅರೆ! ರಾಮಸ್ವಾಮಿ ಎಲ್ಲಿ?' ಮತ್ತೇನೋ ಅಪಾಯದ ಮುನ್ಸೂಚನೆಯೆಂದು ಹೌಹಾರಿದವಳು ಕಿರಣನನ್ನು ಪ್ರಶ್ನಿಸಿದಳು. ಕಿರಣನಿಗೂ ಅಲ್ಲಿಯವರೆಗೆ ಅವನ ನೆನಪೇ ಆಗದಂತೆ ಮಾತಿನಲ್ಲಿಯೇ ಮುಳುಗಿದ್ದ. ಕ್ಷಣ ಹೊತ್ತು ತಡ ಮಾಡದೆ ಅವನು ಹೊರಗೆ ಜಿಗಿದು ಬಂದ.

ಅಂಗಳದಲ್ಲಿಯೂ ರಾಮಸ್ವಾಮಿಯ ಕುರುಹು ಇಲ್ಲ. ಆತಂಕ ಸುಳಿಯಿತು. ತಮ್ಮ ಮಾತುಕತೆಯನ್ನು ಕೇಳಿಸಿಕೊಳ್ಳಲು ಇಚ್ಛಿಸದೆ ಹೊರಗೆ ಬಂದಿರಬಹುದೆಂದುಕೊಂಡಿದ್ದ. ಆದರೆ ಈಗ ರಾಮಸ್ವಾಮಿಯೂ ಕಣ್ಮರೆ!

'ರಾಮಸ್ವಾಮಿ, ಎಲ್ಲಿದ್ದೀರಿ?' ವೆರಾಂಡದಲ್ಲಿ ನಿಂತು ಕೂಗು ಹಾಕಿದ. ಪ್ರತಿಕ್ರಿಯೆ ಇಲ್ಲ!

ಮೇನಕಾ ಕೂಡ ಆತಂಕದಿಂದ ಹೊರಗೆ ಧಾವಿಸಿದಳು.

'ಏನಾಯ್ತು ಕಿರಣ? ರಾಮಸ್ವಾಮಿ ಎಲ್ಲಿ?' ಆತಂಕದ ಪ್ರಶ್ನೆ ಕೇಳಿದಳು. ಕಿರಣನ ಮುಖದಲ್ಲಿಯೂ ಗಾಬರಿಯಿರುವುದನ್ನು ಗಮನಿಸಿದ ಮೇಲೆ ಏನೋ ನಡೆದಿದೆ ಅನ್ನುವುದು ಅವಳ ಗಮನಕ್ಕೆ ಬಂತು.